


ಪುರುಷೋತ್ತಮನಿಗೆ ಒಂದು ಆಸೆ.

ಕೋರೊ ಭಗವತಿಯೇ, ಪುರುಷೋತ್ತಮನ ಆಸೆ ಸಾಧ್ಯವಾಗುವಂತೆ ಮಾಡು.

ಗುರುವಾಯೂರಪ್ಪನೇ ಅವನ ಆಸೆಯನ್ನು ನೆರವೇರಿಸಿಕೊಡು.

ಶ್ರೀ ಅಯ್ಯಪ್ಪನೇ ಪುರುಷೋತ್ತಮನ ಆಸೆಯನ್ನು ಸಫಲವಾಗುವಂತೆ ಮಾಡು.

ಯಾವುದಕ್ಕೂ ಯಾವಾಗಲೂ ಆಸೆ ಪಟ್ಟವನೇ ಅಲ್ಲ. ತುಂಬಾನೇ ಸಾಧು ಸ್ವಾಭಾವದವನು. ಸಣ್ಣ ವಯಸ್ಸಿನಿಂದಲೂ ಯಾವುದಕ್ಕೂ ಆಸೆ ಪಟ್ಟವನಲ್ಲ. ಕೋರೋ ಭಗವತಿಯ ಜಾತ್ರೆಗೆ ಹೊರ ಊರುಗಳಿಂದ ಬರುವ ವ್ಯಾಪಾರಸ್ಥರು ಪೀಪಿ, ಬಲೂನು, ಚೆಂಡು ಮುಂತಾದವುಗಳನ್ನು ತಂದು ಮಾರಾಟ ಮಾಡುತ್ತಾರೆ.

ಒಮ್ಮೆಯೂ ಪುರುಷೋತ್ತಮನು ಅವುಗಳಿಗಾಗಿ ಅಪೇಕ್ಷೆಪಟ್ಟವನಲ್ಲ.

"ಅಮ್ಮಾ, ನನಗೆ ಒಂದು ಬಲೂನು... ಕೆಂಪು ಬಲೂನು."

ಹೀಗೆ ಬೇಕೆಂದು ಎಂದಿಗೂ ಕೇಳಿದವನಲ್ಲ.

"ಅಪ್ಪಾ, ನನಗೊಂದು ಚೆಂಡು..."

"ಅಮ್ಮಾ, ನನಗೊಂದು ಪೀಪಿ..."

ಎಂದಿಗೂ ಇಲ್ಲ.

ಯಾವುದೂ ಬೇಡ.

ದೊಡ್ಡವನಾದ ಮೇಲೂ ಪುರುಷೋತ್ತಮನಿಗೆ ಆಸೆ ಅಂತ ಯಾವುದೂ ಇರಲಿಲ್ಲ.

ಅವನಿಗೆ ಟರ್ಲಿನ್ ಟೆರಿಕಾಟ್ ಬಟ್ಟೆ ಬೇಕೂಂತ ಆಸೆ ಏನೂ ಇರಲಿಲ್ಲ.

ಅವನಿಗೆ ವಾಚ್ ಬೇಕೂಂತ ಆಸೆ ಇರಲಿಲ್ಲ.

ಸಿನಿಮಾ ನೋಡುವದಕ್ಕಾಗಿ ಹಣ ಬೇಕಿರಲಿಲ್ಲ.

ಪುರುಷೋತ್ತಮನು ಒಮ್ಮೆಯಾದರೂ ಯಾವುದಕ್ಕಾದರೂ ಆಸೆ ಪಟ್ಟವನೇ ಅಲ್ಲ. ಈ ರೀತಿ ಯಾವುದೇ ಆಸೆ ಇಲ್ಲದಿದ್ದ ಪುರುಷೋತ್ತಮನಿಗೆ ಈಗ ಒಂದು ಆಸೆ ಉಂಟಾಗಿದೆ. ಆತನಿಗೀಗ ಒಂದು "ನೊಣ"ವಾಗಬೇಕೆಂಬ ಆಸೆ.

ಕೋರೋ ಭಗವತಿಯೆ, ಪುರುಷೋತ್ತಮನನ್ನು ಒಂದು 'ನೊಣ'ವನ್ನಾಗಿಸು.

ಗುರುವಾಯುರಪ್ಪಾ, ಅವನನ್ನು ಒಂದು